ಬಸ್ಸುಗಳನ್ನು ಕೊಡಬೇಕು ಎಂದು ಅವರು ಕೇಳಿರತಕ್ಕಂಥಾದ್ದು. ಕೆಲವು ಮಾರ್ಗಗಳಲ್ಲಿ ಸ್ಥಳೀಯವಾಗಿ ಅವರ ಕ್ಷೇತ್ರದಲ್ಲಿ ಸಂಚಾರ ಮಾಡುವ ವ್ಯವಸ್ಥೆ ಕಲ್ಪಿಸಬೇಕೆಂದು ಅವರ ಇಂಗಿತ ಇದೆ. ಅದಕ್ಕೆ ವ್ಯವಸ್ಥೆ ಮಾಡಿಕೊಡುತ್ತೇನೆ ಎಂದು ಹೇಳುತ್ತೇನೆ. ಸಂತೆಮಾರನಹಳ್ಳಿಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ಸು ನಿಲ್ದಾಣ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಪ್ರಸ್ತಾಪ ನಮ್ಮ ಮುಂದೆ ಇರಲಿಲ್ಲ. ಇದಕ್ಕೆ ಜಾಗ ಬೇಕಾಗುತ್ತದೆ. ಜಾಗದ ಜೊತೆಗೆ ಅದಕ್ಕೆ ಅಂದಾಜುಪಟ್ಟಿ ಎಲ್ಲಾ ಸಿದ್ಧಮಾಡಿ ಅದನ್ನು ಪರಿಶೀಲಿಸುತ್ತೇವೆ. ಹೆಚ್ಚುವರಿ ಬಸ್ಸುಗಳನ್ನು ಹಾಕಿಕೊಡಬೇಕೆಂದು ಹೇಳಿದ್ದಾರೆ. ಅವರೇ ಪ್ರತ್ಯೇಕವಾಗಿ ಬಂದು ಆ ಮಾರ್ಗಗಳನ್ನು ಕೊಡಲಿ, ಅಲ್ಲಿ ಅನುಸೂಚಿಗಳನ್ನು ಶೆಡ್ಯೂಲ್‌ನ್ನು ಹಾಕಿ ಮಾಡಿಕೊಡುತ್ತೇನೆ.

ಶ್ರೀ ಎ.ಆರ್. ಕೃಷ್ಣಮೂರ್ತಿ :— ಮಾನ್ಯ ಸಚಿವರು ಈ ಬಸ್ಸುನಿಲ್ದಾಣದ ವಿಚಾರದಲ್ಲಿ ಜಾಗದ ಲಭ್ಯತೆ ಮೇಲೆ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದಾರೆ. ಅಲ್ಲಿ ಸರ್ಕಾರಿ ಜಾಗಗಳು ಬೇಕಾದಷ್ಟು ಇವೆ. ನಮ್ಮ ತಾಲ್ಲೂಕಿನ ತಹಸೀಲ್ದಾರರ ಮುಖಾಂತರ ಜಾಗಕ್ಕೆ ಅವಕಾಶ ಮಾಡಿಕೊಡುತ್ತೇನೆ. ಮಾನ್ಯ ಸಚಿವರು ಏನು ಬಸ್ಸು ನಿಲ್ದಾಣವನ್ನು ಮಾಡಿಕೊಡುತ್ತೇನೆ ಎಂದು ಹೇಳಿದ್ದಾರೆ ಅದಕ್ಕೆ ಅವರಿಗೆ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ಮತ್ತೆ ಈ 18 ಬಸ್ಸುಗಳು ಕಾರ್ಯಾಚರಣೆಯಲ್ಲಿದ್ದು, ಈ 18 ಬಸ್ಸುಗಳು ಕಾರ್ಯಾಚರಣೆ ಮಾಡುತ್ತಿದೆ ಎಂಬ ಅಂಶವನ್ನು ಅವರು ವ್ಯಕ್ತಪಡಿಸಿದ ಸಂದರ್ಭದಲ್ಲಿ ನಮ್ಮ ಕ್ಷೇತ್ರದ ನಂಜನಗೂಡು ತಾಲ್ಲೂಕು, ಕೌಲಂಗಿ ಹೋಬಳಿ ಭಾಗದಲ್ಲಿ ಸುಮಾರು ಗ್ರಾಮಗಳು ಎಂದರೆ ಕೂಡ್ಲಾಪುರ, ಹಳೇಪುರ, ನೇರಳೆ, ದೇವನೂರು, ಮತ್ತು ದಾಸನೂರು ಈ ಮಾರ್ಗಗಳಲ್ಲಿ ಬಸ್ ರೂಟ್ಸ್ ಅಪ್ರೂವ್ ಆಗಿದ್ದರೂ ಕೂಡ ಸರಿಯಾದ ಸಮಯಕ್ಕೆ ಸರಿಯಾಗಿ ಬಸ್ಸುಗಳು ಸಂಚಾರ ಮಾಡುತ್ತಿಲ್ಲ. ಇದನ್ನು ಸ್ಟ್ರೀಮ್‌ಲೈನ್ ಮಾಡಬೇಕಾಗುತ್ತದೆ. ಇದನ್ನು ಮಾಡಬೇಕು ಎಂದೂ ಕೂಡ ನಾನು ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ :— ಮಾಡಿಕೊಡುತ್ತೇನೆ.

ಗುಳೇದಗುಡ್ಡ ಮತಕ್ಷೇತ್ರದಲ್ಲಿ ತೋಟಗಾರಿಕೆ ಕಾರ್ಯಕ್ರಮಗಳು.

332(2194) ಶ್ರೀ ರಾಜಶೇಖರ್ ಶೀಲವಂತ ವೀರಣ್ಣ (ಗುಳೇದಗುಡ್ಡ) ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದಗುಡ್ಡ ಮತಕ್ಷೇತ್ರದಲ್ಲಿ 1998-99 ರಲ್ಲಿ ಇಲಾಖೆಯು ಕೈಗೊಂಡ ವಿವಿಧ ಕಾರ್ಯಕ್ರಮಗಳು ಯಾವುವು (ಹುನಗುಂದ, ಬಾದಾಮಿ, ಬಾಗಲಕೋಟೆ ತಾಲ್ಲೂಕು ವಿವರ ನೀಡುವುದು)

ಆ) ಇದಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು? (ವಿವಿಧ ಕಾರ್ಯಕ್ರಮಗಳ ಪ್ರಕಾರ ವಿವರ ನೀಡುವುದು)

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :—

ಅ) <u>ಕೃಷಿ ಇಲಾಖೆ</u>

ಗುಳೇದಗುಡ್ಡ ವಿಧಾನಸಭಾ ಮತಕ್ಷೇತ್ರದಲ್ಲಿ ಅಂದರೆ ಹುನಗುಂದ, ಬಾದಾಮಿ, ಬಾಗಲಕೋಟಿ, ತಾಲ್ಲೂಕುಗಳಿಗೆ ಸಂಬಂಧಿಸಿದಂತೆ 1998-99ರಲ್ಲಿ ಕೃಷಿ ಇಲಾಖೆಯು ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.

1) ಬೆಳೆ ಉತ್ಪಾದನೆ ಯೋಜನೆ

ಅ) ಸಣ್ಣ ಟ್ರಾಕ್ಟರ್ ವಿತರಣೆ ಯೋಜನೆ.
ಆ) ಹೈಟೆಕ್ ಕೃಷಿ ಯಂತ್ರೋಪಕರಣಗಳ ವಿತರಣೆ ಯೋಜನೆ.
ಇ) ಸಸ್ಯಸಂರಕ್ಷಣೆ ಯೋಜನೆ.
ಈ) ಸಮಗ್ರ ಏಕದಳ ಧಾನ್ಯ ಅಭಿವೃದ್ಧಿ ಯೋಜನೆ.
ಉ) ರಾಷ್ಟ್ರೀಯ ದ್ವಿದಳಧಾನ್ಯ ಅಭಿವೃದ್ಧಿ ಯೋಜನೆ.
ಊ) ಎಣ್ಣೆಕಾಳು ಅಭಿವೃದ್ಧಿ ಯೋಜನೆ.
ಋ) ತೀವ್ರ ಹತ್ತಿ ಅಭಿವೃದ್ಧಿ ಯೋಜನೆ.
ೠ) ಮುಸುಕಿನಜೋಳ ಅಭಿವೃದ್ಧಿ ಯೋಜನೆ.
ಎ) ವಿಶೇಷ ಘಟಕ ಯೋಜನೆ.
ಏ) ಗಿರಿಜನ ಉಪಯೋಜನೆ.
ಐ) ಕೇಂದ್ರ ಪುರಸ್ಕೃತ ಒರಟು ಧಾನ್ಯ ಕಿರುಚೀಲ ಪ್ರಾತ್ಯಕ್ಷಿಕೆ ಯೋಜನೆ.
ಒ) ಸಾವಯವ ಕೃಷಿ ಯೋಜನೆ.
ಓ) ಕಬ್ಬು ಬೆಳೆ ಅಭಿವೃದ್ಧಿ ಯೋಜನೆ.

2) ಭೂಸಾರ ಸಂರಕ್ಷಣಾ ಯೋಜನೆಗಳು

ಅ) ಉದ್ಯೋಗ ಭರವಸೆ ಯೋಜನೆ
ಆ) ಜವಾಹರ್ ರೋಜ್‌ಗಾರ್ ಯೋಜನೆ
ಇ) ದಶಲಕ್ಷ ಬಾವಿ ಯೋಜನೆ
ಈ) ಬಯಲುಸೀಮೆ ಅಭಿವೃದ್ಧಿ ಯೋಜನೆ
ಉ) ವಿಶೇಷ ಘಟಕ ಯೋಜನೆ

ತೋಟಗಾರಿಕೆ

ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಕೃಷಿ ಇಲಾಖೆ

1998-99 ನೇ ಸಾಲಿನಲ್ಲಿ ಗುಳೇದಗುಡ್ಡ ವಿಧಾನಸಭಾ ಕ್ಷೇತ್ರದಲ್ಲಿ ಕೃಷಿ ಇಲಾಖೆಯು ಕಾರ್ಯಗತಗೊಳಿಸಿದ ವಿವಿಧ ಯೋಜನೆಗಳಡಿಯಲ್ಲಿ ಒಟ್ಟು ರೂ. 46,80,582-00 ಗಳನ್ನು ವೆಚ್ಚ ಮಾಡಲಾಗಿದೆ.

ಅ) ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ತೋಟಗಾರಿಕೆ ಇಲಾಖೆ

ವೆಚ್ಚದ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಅನುಬಂಧ - 1

1998-99ನೇ ಸಾಲಿನಲ್ಲಿ ಗುಳೇದಗುಡ್ಡ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಕೃಷಿ ಇಲಾಖೆಯಿಂದ ಅನುಷ್ಠಾನಗೊಳಿಸಲಾದ ಕಾರ್ಯಕ್ರಮಗಳು ಹಾಗೂ ವೆಚ್ಚದ ವಿವರಗಳು

ಕ್ರಮ ಸಂಖ್ಯೆ	ಯೋಜನೆ	ತಾಲ್ಲೂಕು	ಘಟಕ	ಸಾಧನೆ ಭೌತಿಕ	ಆರ್ಥಿಕ
1	2	3	4	5	6
1)	ಸಣ್ಣ ಟ್ರಾಕ್ಟರ್ ವಿತರಣಾ ಯೋಜನೆ	ಬಾಗಲಕೋಟೆ	ಟ್ರಾಕ್ಟರ್	5	150000
2)	ಪೈಟಿಕ್ ಕೃಷಿ ಯಂತ್ರೋಪಕರಣಗಳ	ಹುನಗುಂದ್	ಒಕ್ಕಣೆ ಯಂತ್ರ	1	18025
	ವಿತರಣೆ ಯೋಜನೆ	ಬಾಗಲಕೋಟೆ	ಒಕ್ಕಣೆ ಯಂತ್ರ	1	18025
			ಒಟ್ಟು:	2	36050
3)	ಸಸ್ಯ ಸಂರಕ್ಷಣಾ ಯೋಜನೆ	ಹುನಗುಂದ್	ಸಸ್ಯ ಸಂರಕ್ಷಣಾ ಉಪಕರಣ	6	3324
	ಬಾಗಲಕೋಟೆ	ಸಸ್ಯ ಸಂರಕ್ಷಣಾ ಉಪಕರಣ		4	3161
	ಬಾದಾಮಿ	ಸಸ್ಯ ಸಂರಕ್ಷಣಾ ಔಷಧಿ		-	2600
		ಬಾಗಲಕೋಟೆ	ಸಸ್ಯ ಸಂರಕ್ಷಣಾ ಔಷಧಿ	261 ಲೀ	29848
4)	ಸಮಗ್ರ ಏಕದಳ ಧಾನ್ಯ ಅಭಿವೃದ್ಧಿ ಯೋಜನೆ	ಹುನಗುಂದ	ತುಂತುರು ನೀರಾವರಿ ಉಪಕರಣಗಳು	3	60000
		ಬಾಗಲಕೋಟೆ	ತುಂತುರು ನೀರಾವರಿ ಉಪಕರಣಗಳು	4	70121
		ಬಾದಾಮಿ	ತುಂತುರು ನೀರಾವರಿ ಉಪಕರಣಗಳು	2	40000
		ಬಾಗಲಕೋಟೆ	ತುಂತುರು ನೀರಾವರಿ ಉಪಕರಣಗಳು	2.04 ಕ್ಷಿಂ	1032
			ಒಟ್ಟು:	9	171153

1	2	3	4	5	6
5)	ರಾಷ್ಟ್ರೀಯ ದ್ವಿದಳ ಧಾನ್ಯ ಅಭಿವೃದ್ಧಿ	ಹುನಗುಂದ್	ತುಂತುರು ನೀರಾವರಿ ಉಪಕರಣಗಳು	1	20000
		ಬಾದಾಮಿ	ತುಂತುರು ನೀರಾವರಿ ಉಪಕರಣಗಳು	1	20000
		ಹುನಗುಂದ್	ಕಿರು ಟೀಲಗಳು	15	2264
		ಬಾಗಲಕೋಟೆ	ಕಿರು ಟೀಲಗಳು	15	2264
		ಬಾದಾಮಿ	ದೊಡ್ಡ ಪ್ರಮಾಣದ ಪ್ರಾತ್ಯಕ್ಷಿತೆ	10 ಹೆ.	9000
		ಬಾಗಲಕೋಟೆ	ಐ.ಪಿ.ಎಂ. ಪ್ರಾತ್ಯಕ್ಷಿತೆ	3 ಹೆ.	4057
		ಬಾಗಲಕೋಟೆ	ಪ್ರಮಾಣಿತ ಬೀಜಗಳ ವಿತರಣೆ	2.04 ಕ್ವಿ.	720
				ಒಟ್ಟು 32	58085
6)	ಎಣ್ಣೆಕಾಳು ಉತ್ಪಾದನಾ ಯೋಜನೆ	ಹುನಗುಂದ್	ಕೃಷಿ ಉಪಕರಣಗಳು	1	187
		ಬಾಗಲಕೋಟೆ	ಕೃಷಿ ಉಪಕರಣಗಳು	13	2438
		ಹುನಗುಂದ್	ಸಸ್ಯ ಸಂರಕ್ಷಣಾ ಉಪಕರಣ	5	2770
		ಬಾಗಲಕೋಟೆ	ಸಸ್ಯ ಸಂರಕ್ಷಣಾ ಉಪಕರಣ	6	3375
		ಹುನಗುಂದ್	ತುಂತುರು ನೀರಾವರಿ ಉಪಕರಣಗಳು	6	120000
		ಬಾಗಲಕೋಟೆ	ತುಂತುರು ನೀರಾವರಿ ಉಪಕರಣಗಳು	1	20000
		ಬಾದಾಮಿ	ತುಂತುರು ನೀರಾವರಿ ಉಪಕರಣಗಳು	5	98000
		ಬಾಗಲಕೋಟೆ	ಪ್ರಮಾಣಿತ ಬೀಜಗಳ ವಿತರಣೆ	9 ಕ್ವಿ.	2700
		ಹುನಗುಂದ್	ಬೀಜ ಕಿರು ಟೀಲಗಳು	62	16084
		ಬಾಗಲಕೋಟೆ	ಬೀಜ ಕಿರು ಟೀಲಗಳು	190	11217
		ಬಾದಾಮಿ	ದೊಡ್ಡ ಪ್ರಮಾಣದ ಪ್ರಾತ್ಯಕ್ಷಿತೆ	10 ಹೆ.	25000
			ಒಟ್ಟು :	389 ಸಂ	301771

1	2	3	4		5	6
7)	ತೀವ್ರ ಹತ್ತಿ ಅಭಿವೃದ್ಧಿ ಯೋಜನೆ	ಹುನಗುಂದ್	ಸಸ್ಯ ಸಂರಕ್ಷಣಾ ಉಪಕರಣಗಳು		2	1108
		ಬಾದಾಮಿ	ಸಸ್ಯ ಸಂರಕ್ಷಣಾ ಉಪಕರಣಗಳು		6	3600
		ಬಾಗಲಕೋಟೆ	ಸಸ್ಯ ಸಂರಕ್ಷಣಾ ಉಪಕರಣಗಳು		1	554
		ಬಾದಾಮಿ	ಪ್ರಾತ್ಯಕ್ಷಿತೆ	20	ಹೆ.	1100
		ಬಾಗಲಕೋಟೆ	ಪ್ರಾತ್ಯಕ್ಷಿತೆ	12	ಹೆ.	3900
				ಒಟ್ಟು : 9	ಸಂ	
				32	ಹೆ.	
8)	ಮುಸುಕಿನ ಜೋಳ ಅಭಿವೃದ್ಧಿ ಯೋಜನೆ	ಬಾಗಲಕೋಟೆ	ನವೀನ ತಾಂತ್ರಿಕತೆ ಪ್ರಾತ್ಯಕ್ಷಿತೆ		5	4780
9)	ವಿಶೇಷ ಘಟಕ ಯೋಜನೆ	ಹುನಗುಂದ್	ಸಸ್ಯ ಸಂರಕ್ಷಣಾ ಉಪಕರಣಗಳು		2	1724
		ಬಾಗಲಕೋಟೆ	ಸಸ್ಯ ಸಂರಕ್ಷಣಾ ಉಪಕರಣಗಳು		1	887
		ಬಾದಾಮಿ	ರಾಶಿ ಯಂತ್ರ ಪೂರೈಕೆ		1	20000
		ಬಾಗಲಕೋಟೆ	ರಾಶಿ ಯಂತ್ರ ಪೂರೈಕೆ		1	20000
		ಬಾದಾಮಿ	ರಾಶಿ ಯಂತ್ರ ಪೂರೈಕೆ		1	18000
		ಬಾದಾಮಿ	ಐ.ಪಿ.ಸೆಟ್		1	10000
		ಬಾದಾಮಿ	ಕೃಷಿ ಪರಿಕರ		1	2800
		ಬಾಗಲಕೋಟೆ	ಕೃಷಿ ಪರಿಕರ		1	2470
		ಬಾಗಲಕೋಟೆ	ರಾಶಿ ಯಂತ್ರ ಪೂರೈಕೆ		1	20000
		ಹುನಗುಂದ್	ರಾಶಿ ಯಂತ್ರ ಪೂರೈಕೆ		1	20000
		ಬಾಗಲಕೋಟೆ	ರಾಶಿ ಯಂತ್ರ ಪೂರೈಕೆ		1	18000
				ಒಟ್ಟು	12	133881

1	2	3	4	5	6
10)	ಗಿರಿಜನ ಉಪಯೋಜನೆ	ಹುನಗುಂದ್	ಕೃಷಿ ಉಪಕರಣಗಳು	2	750
		ಹುನಗುಂದ್	ಸಸ್ಯ ಸಂರಕ್ಷಣಾ ಉಪಕರಣಗಳು	2	1774
		ಬಾದಾಮಿ	ರಾಶಿ ಯಂತ್ರಗಳು	1	18000
				ಒಟ್ಟು : 5	20524
11)	ವಿಶೇಷ ಘಟಕ ಯೋಜನೆ (ರಾಜ್ಯ ವಲಯ)	ಬಾಗಲಕೋಟೆ	ರಾಶಿ ಯಂತ್ರಗಳು	2	40000
12)	ಸಸ್ಯ ಸಂರಕ್ಷಣಾ ಯೋಜನೆ	ಬಾಗಲಕೋಟೆ	ಕೀಟ ನಾಶಕಗಳ ವಿತರಣೆ	261 ಲೀ,	29848
13)	ಕೇಂದ್ರ ಪುರಸ್ಕೃತ ಒರಟು ಧಾನ್ಯ ಕಿರು ಚೀಲ ಪ್ರಾತ್ಯಕ್ಷಿತೆ ಯೋಜನೆ	ಬಾಗಲಕೋಟೆ	ಕಿರು ಚೀಲಗಳು	27	810
		ಹುನಗುಂದ್	ಕಿರು ಚೀಲಗಳು	69	384
				ಒಟ್ಟು : 96	1194
14)	ಸಾವಯವ ಕೃಷಿ ಯೋಜನೆ	ಬಾಗಲಕೋಟೆ	ಎರೆಹುಳ ಗೊಬ್ಬರ ಉತ್ಪಾನೆ ಪ್ರೋ.ದನ	3	1200
		ಬಾಗಲಕೋಟೆ	ಹಸಿರೆಲೆ ಗೊಬ್ಬರ ಬೀಜ ವಿತರಣೆ	110 ಕೆ.ಜಿ.	550
		ಬಾಗಲಕೋಟೆ	ಸಂಸ್ಕರಿಸಿದ ಕಾಂಪೊಸ್ಟ್ ಪೂರೈಕೆ	500 ಕೆ.ಜಿ.	612
				ಒಟ್ಟು	2362
15)	ಕಬ್ಬು ಬೆಳೆ ಅಭಿವೃದ್ಧಿ ಯೋಜನೆ	ಬಾಗಲಕೋಟೆ	ಟ್ರಾಕ್ಟರ್ ಚಾಲಿತ ಉಪಕರಣಗಳು	2	9562

1	2	3	4	5	6
		ಭೂಸಾರ ಸಂರಕ್ಷಣೆ ಕಾಮಗಾರಿಗಳು			
16)	ಉದ್ಯೋಗ ಭರವಸೆ ಯೋಜನೆ	ಹುನಗುಂದ್	ಚೆಕ್ ಡ್ಯಾಂ	6	351454
		ಬಾದಾಮಿ	ಚೆಕ್ ಡ್ಯಾಂ	3	132000
		ಬಾದಾಮಿ	ನಾಲಾ ಬದು	11	803900
		ಬಾಗಲಕೋಟೆ	ಚೆಕ್ ಡ್ಯಾಂ	5	504932
		ಬಾಗಲಕೋಟೆ	ಸಮಪಾತಳಿ ಬದು	362 ಹೆ.	745019
		ಬಾಗಲಕೋಟೆ	ರಬಲ್ ತಡೆಗಳು	10	6091
				ಒಟ್ಟು	2543396
17)	ಜವಹಾರ್ ರೋಜ್‌ಗಾರ್ ಯೋಜನೆ	ಹುನಗುಂದ್	ಚೆಕ್ ಡ್ಯಾಂ	2	136319
18)	ದಶಲಕ್ಷ ಬಾವಿ ಯೋಜನೆ	ಬಾದಾಮಿ	ಚೆಕ್ ಡ್ಯಾಂ	2	134000
		ಬಾದಾಮಿ	ನಾಲಾಬದು	2	136000
		ಬಾಗಲಕೋಟೆ	ಚೆಕ್ ಡ್ಯಾಂ	1	133834
		ಬಾಗಲಕೋಟೆ	ಚೆಕ್ ಡ್ಯಾಂ	2	202000
19)	ಬಯಲುಸೀಮೆ ಅಭಿವೃದ್ಧಿ ಯೋಜನೆ	ಬಾದಾಮಿ	ನಾಲಾಬದು	1	47600
		ಬಾದಾಮಿ	ಚೆಕ್ ಡ್ಯಾಂ	2	97000
		ಬಾಗಲಕೋಟೆ	ರಬಲ್ ತಡೆಗಳು	9	29558
		ಬಾಗಲಕೋಟೆ	ಚೆಕ್ ಡ್ಯಾಂ	1	108502
					282660

1	2	3	4	5	6
20)	ವಿಶೇಷ ಘಟಕ ಯೋಜನೆ	ಬಾಗಲಕೋಟಿ	ಸಮಪಾತಳಿ ಬದು	26.57 ಹೆ.	54201
		ಬಾಗಲಕೋಟಿ	ಕೃಷಿ ಹೊಂಡ	1	14992
		ಬಾಗಲಕೋಟಿ	ಬೋಲ್ಡರ್ ತಡೆಗಳು	5	4733
				ಒಟ್ಟು	73926
				ಮಹಾ ಮೊತ್ತ	4630592

(ಸಿದ್ಧಲಿಂಗಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಮತ್ತು ತೋಟಗಾರಿಕೆ ಇಲಾಖೆ.

ಅನುಬಂಧ - 3

1998-99ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯು ಈ ಕೆಳಕಂಡ ತಾಲ್ಲೂಕುಗಳಲ್ಲಿ ಹಮ್ಮಿಕೊಂಡ ವಿವಿಧ ಕಾರ್ಯಕ್ರಮಗಳ ವಿವರ.

ಕ್ರಮ ಸಂಖ್ಯೆ	ಕಾರ್ಯಕ್ರಮಗಳು : ಯೋಜನೆಗಳು	ಹುನಗುಂದ ಆರ್ಥಿಕ		ಬಾದಾಮಿ ಆರ್ಥಿಕ		ಬಾಗಲಕೋಟೆ ಆರ್ಥಿಕ	
		ಗುರಿ	ಸಾಧನೆ	ಗುರಿ	ಸಾಧನೆ	ಗುರಿ	ಸಾಧನೆ
1	2	3	4	5	6	7	8
	<u>ಜಿಲ್ಲಾವಲಯ ಯೋಜನೆಗಳು</u>						
1)	ಬೀಜದ ತೆಂಗು ಸಂಗ್ರಹಣೆ ಹಾಗೂ ನರ್ಸರಿಗಳ ನಿರ್ವಹಣೆ	-	-	0.50	0.50	0.33	0.32
2)	ಹಣ್ಣು ಮತ್ತು ತರಕಾರಿ ಅಭಿವೃದ್ಧಿ ಹಾಗೂ ಮಾರಾಟ	-	-	-	-	8.00	4.90
3)	ಪ್ರಾತ್ಯಕ್ಷತೆಗಳು	0.40	0.40	0.48	0.48	0.48	0.47
4)	ವಿಚಾರಗೋಷ್ಠಿ, ಕ್ಷೇತ್ರೋತ್ಸವ ಹಾಗೂ ರೈತರ ಪ್ರವಾಸ	-	-	-	-	8.00	4.90
5)	ಪ್ರಚಾರ ಮತ್ತು ಸಾಹಿತ್ಯ	0.5	0.15	0.15	0.15	1.49	1.48
6)	ಅಂಚೆ ತರಬೇತಿ	0.45	0.045	0.045	0.045	0.045	0.045
7)	ಸರಕಾರಿ ಕಛೇರಿ ಕಟ್ಟಡ ಹಾಗೂ ಅತಿಥಿ ಗೃಹಗಳ ಮುಂದಿಡಲು ಅಲಂಕಾರಿಕ ಸಸಿಗಳ ಅಭಿವೃದ್ಧಿ	0.05	0.05	0.05	0.05	0.08	0.08
8)	ತೋಟಗಾರಿಕೆ ಬೆಳೆಗಳ ವಿಸ್ತರಣೆಯಲ್ಲಿ ರೈತರಿಗೆ ಸಹಾಯ	-	-	-	-	3.32	3.92

1	2	3	4	5	6	7	8
9)	ಕೃಷಿ ಕ್ಷೇತ್ರ ಅಭಿವೃದ್ಧಿ ಹಾಗೂ ಮೂಲಭೂತ ಸೌಕರ್ಯಗಳು	0.25	0.25	0.25	0.25	--	--
10)	ಮಂಡಲ ನರ್ಸರಿಗಳ ಅಭಿವೃದ್ಧಿ	0.10	0.10	0.10	0.10	--	--
11)	ಸ್ವಾಭಿವೃದ್ಧಿ	0.46	0.26	0.04	0.04	--	--
12)	ಸಾಮಾಜಿಕ ತೋಟಗಾರಿಕೆ	0.09	0.09	0.09	0.09	0.09	0.09
13)	ಶೇಕಡ 50ರ ಸಹಾಯಧನದಲ್ಲಿ ಸಸ್ಯ ಸಂರಕ್ಷಣಾ ಔಷಧಿ ಸರಬರಾಜು	0.45	0.392	0.40	0.50	0.65	0.658
14)	ತೋಟಗಾರಿಕೆ ಕಟ್ಟಡಗಳು	--	--	--	--	0.30	0.80
15)	ಸಸ್ಯ ಸಂರಕ್ಷಣಾ ಪ್ರಯೋಗಾಲಯಗಳು	--	--	0.40	0.50	--	--
16)	ವಿಶೇಷ ಘಟಕ ಯೋಜನೆ (ರಾಜ್ಯ)	0.34	0.34	0.30	0.30	0.16	0.134
17)	ವಿಶೇಷ ಘಟಕ ಯೋಜನೆ (ಕೇಂದ್ರ)	--	--	0.42	0.42	0.46	0.46
18)	ಗಿರಿಜನ ಅಭಿವೃದ್ಧಿ ಯೋಜನೆ (ರಾಜ್ಯ)	0.13	0.13	0.16	0.16	0.13	0.13
19)	ಗಿರಿಜನ ಅಭಿವೃದ್ಧಿ ಯೋಜನೆ (ಕೇಂದ್ರ)	0.60	0.40	0.40	0.20	0.20	--
	ಒಟ್ಟು	2.82	2.807	4.285	4.125	15.685	13.897
	<u>ವಿಶೇಷ ಯೋಜನೆಗಳು</u>						
1)	ಉದ್ಯೋಗ ಭರವಸೆ ಯೋಜನೆ	4.00	4.05	4.52	0.17	4.60	4.58

1	2		3	4	5	6	7	8
	ರಾಜ್ಯ : ಕೇಂದ್ರ ವಲಯ ಯೋಜನೆಗಳು							
1)	ಸಮಗ್ರ ಸಾಂಬಾರು ಬೆಳೆ ಯೋಜನೆ		0.46	0.46	0.5	0.48	0.47	0.47
2)	ಉಷ್ಣವಲಯ ಪ್ರದೇಶದಲ್ಲಿ ಹಣ್ಣಿನ ತೋಟಗಳ ಅಭಿವೃದ್ಧಿ		0.61	0.61	0.8	0.75	1.75	1.75
3)	ಗ್ರಾಮೀಣ ಪ್ರದೇಶದಲ್ಲಿ ಪೌಷ್ಟಿಕ ತೋಟಗಳ ಅಭಿವೃದ್ಧಿ		0.025	0.025	0.25	0.025	0.025	0.025
4)	ಹನಿ ನೀರಾವರಿ ಯೋಜನೆ		5.00	5.033	7.0	7.02	32.00	31.33
5)	ತರಕಾರಿ ಉತ್ಪನ್ನ ಹಾಗೂ ವಿತರಣೆ		0.09	0.09	0.09	0.09	0.094	0.094
6)	ಗಿರಿಜನ ಅಭಿವೃದ್ಧಿ ಯೋಜನೆ		0.014	0.014	0.29	0.29	0.035	0.035
7)	ವಿಶೇಷ ಘಟಕ ಯೋಜನೆ		0.045	0.445	0.50	0.452	0.31	0.31
8)	ನಮ್ಮ ಮನೆ ನಮ್ಮ ತೋಟ		0.18	0.18	0.18	0.18	0.18	0.18
		ಒಟ್ಟು	6.829	6.827	9.61	9.277	34.874	34.196

(ಸಿದ್ಧಲಿಂಗಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಮತ್ತು ತೋಟಗಾರಿಕೆ ಇಲಾಖೆ.

ಅನುಬಂಧ - 2

ಬಿಜಾಪುರ ಜಿಲ್ಲೆಯಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ 1998-99ನೇ ಸಾಲಿನಲ್ಲಿ ಸಾಧಿಸಿದ ಪ್ರಗತಿಯ ವಿವರಗಳು

ಯೋಜನೆ : ವಿಶೇಷ ಘಟಕ ಯೋಜನೆ (ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಕಾಂಪೋನೆಂಟ್	ಭೌತಿಕ		1998-99	ಆರ್ಥಿಕ	
		ಗುರಿ	ಸಾಧನೆ	ಫಲಾನುಭವಿಗಳ ಸಂಖ್ಯೆ	ಗುರಿ	ಸಾಧನೆ
1)	ಹಳೇ ತೋಟಗಳ ನಿರ್ವಹಣೆ (1996-97)	270 ಸಂಖ್ಯೆ	270 ಸಂಖ್ಯೆ	270	0.945	0.941
2)	ಹಳೇ ತೋಟಗಳ ಪಾಲನೆ (1997-98)	69 ಸಂಖ್ಯೆ	69 ಸಂಖ್ಯೆ	69	0.448	0.448
3)	ಹೊಸ ತೋಟಗಳ ಸ್ಥಾಪನೆ (1998-99)	90 ಸಂಖ್ಯೆ	91 ಸಂಖ್ಯೆ	91	0.35	1.348
4)	ಸಸ್ಯಾಭಿವೃದ್ಧಿ (ನರ್ಸರಿ ಕಾರ್ಯಕ್ರಮ)					
	ಅ) ಹೂವಿನ ಸಸಿ ಉತ್ಪಾದನೆ	0.20 ಲಕ್ಷ ಸಸಿಗಳು	-	-	0.60	-
	ಆ) ನಿಂಬೆ ಸಸಿ ಉತ್ಪಾದನೆ	1.00 ಲಕ್ಷ ಸಸಿಗಳು	1.00 ಲಕ್ಷ ಸಸಿಗಳು	10	2.00	1.994
	ಇ) ದಾಳಿಂಬೆ ಸಸಿ ಉತ್ಪಾದನೆ	0.30 ಲಕ್ಷ ಸಸಿಗಳು	0.30 ಲಕ್ಷ ಸಸಿಗಳು	6	0.90	0.898
	ಈ) ದ್ರಾಕ್ಷಿ ಸಸಿ ಉತ್ಪಾದನೆ	0.10 ಲಕ್ಷ ಸಸಿಗಳು	0.10 ಲಕ್ಷ ಸಸಿಗಳು	2	0.20	0.199
		1.60 ಲಕ್ಷ ಸಸಿಗಳಿಗೆ	1.30 ಲಕ್ಷ ಸಸಿಗಳ ಉತ್ಪಾದನೆಯಾಗಿದೆ.	448	6.443	5.818
ಯೋಜನೆ : ಗಿರಿಜನ ಉಪ ಯೋಜನೆ.						
1)	ಹಳೇ ತೋಟಗಳ ಪಾಲನೆ (1996-97)	92	92	92	0.322	0.322
2)	ಹಳೇ ತೋಟಗಳ ನಿರ್ವಹಣೆ (1997-98)	65	64	64	0.422	0.417
3)	ಸಸ್ಯಾಭಿವೃದ್ಧಿ ಕಾರ್ಯಕ್ರಮ:					
	ಅ) ನಿಂಬೆ ಸಸಿ ಉತ್ಪಾದನೆ	0.20 ಲಕ್ಷ ಸಸಿಗಳು	0.20 ಲಕ್ಷ ಸಸಿಗಳು	2	0.40	0.389
	ಆ) ದಾಳಿಂಬೆ ಸಸಿ ಉತ್ಪಾದನೆ	0.10 ಲಕ್ಷ ಸಸಿಗಳು	0.10 ಲಕ್ಷ ಸಸಿಗಳು	2	0.30	0.299
		0.30 ಲಕ್ಷ ಸಸಿಗಳು	0.30 ಲಕ್ಷ ಸಸಿಗಳ ಉತ್ಪಾದನೆಯಾಗಿದೆ.	160	1.444	1.427

(ಸಿದ್ಧಲಿಂಗಯ್ಯ)

ಸರ್ಕಾರದ ಅಧೀನ ಕಾರ್ಯದರ್ಶಿ ಕೃಷಿ ಮತ್ತು ತೋಟಗಾರಿಕೆ ಇಲಾಖೆ.

ಶ್ರೀ ರಾಜಶೇಖರ ಶೀಲವಂತ ವೀರಣ್ಣ :— ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಓದಗಿಸಿದ್ದಾರೆ. ಇದರಲ್ಲಿ ಕೃಷಿ ಇಲಾಖೆಯಿಂದ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದು ಹುನಗುಂದ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರತಕ್ಕಂಥ ಏನು ಯೋಜನೆಗಳಿವೆ, ಅವನ್ನು ಅನುಷ್ಠಾನಗೊಳಿಸಿರುವುದಾಗಿ ಹೇಳಿದ್ದಾರೆ. ಆದರೆ ಇದು ಸ್ವಲ್ಪ ಭಿನ್ನವಾಗಿದೆ. ಹುನಗುಂದ ತಾಲ್ಲೂಕಿನಲ್ಲಿ, ಸಾಕಷ್ಟು ಯೋಜನೆಗಳು ಯಾವ ರೀತಿ ಅನುಷ್ಠಾನಗೊಳ್ಳುತ್ತವೆ ಆ ರೀತಿ ಉಳಿದ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳ್ಳುತ್ತಿಲ್ಲ. ಅಲ್ಲಿ ಕಳಪೆ ಕಾಮಗಾರಿಗಳೂ ಕೂಡ ನಡೆಯುತ್ತಾ ಇರತಕ್ಕಂಥಾದ್ದನ್ನು ನಾನು ಸಾಕಷ್ಟು ಸಾರಿ ಮೇಲಾಧಿಕಾರಿಗಳಿಗೆ ತಿಳಿಸಿದ್ದೇನೆ. ಅದರ ಬಗ್ಗೆ ಯಾವುದೇ ಉಲ್ಲೇಖವನ್ನು ಮಾಡಿಲ್ಲ. ಬಾಗಲಕೋಟೆ ತಾಲ್ಲೂಕಿನಲ್ಲಿ ಯಾವರೀತಿ ಕೆಲಸ ಪ್ರಗತಿಯಲ್ಲಿದೆ ಆ ಎಲ್ಲಾ ಯೋಜನೆಗಳನ್ನು ಹೇಗೆ ಅನುಷ್ಠಾನಗೊಳಿಸಲಾಗಿದೆ, ಅದೇರೀತಿ ಹುನಗುಂದ ತಾಲ್ಲೂಕಿನಲ್ಲಿ ಏಕೆ ಅನುಷ್ಠಾನಗೊಳಿಸಲಾಗಿಲ್ಲ, ಎನ್ನುವುದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು. ಅದರ ಜೊತೆಗೆ ಈ ತೋಟಗಾರಿಕೆ

10.40 ಎ.ಎಂ.

ಇಲಾಖೆಯ ಕೆಲಸಕಾರ್ಯಗಳೂ ಕೂಡ ಬಾದಾಮಿ ತಾಲ್ಲೂಕು ಮತ್ತು ಹುನಗುಂದ ತಾಲ್ಲೂಕಿನಲ್ಲಿ ಬಹಳಷ್ಟು ಯೋಜನೆಗಳಲ್ಲಿ ಗುರಿಯನ್ನೂ ತೋರಿಸಿಲ್ಲ ಮತ್ತು ಸಾಧನೆಯನ್ನೂ ತೋರಿಸಿಲ್ಲ. ಹುನಗುಂದ ತಾಲ್ಲೂಕಿನಲ್ಲಿ ಬೀಜ ಸಂಗ್ರಹಣೆ ಮತ್ತು ನರ್ಸರಿಗಳ ನಿರ್ವಹಣೆ ಬಗ್ಗೆ ತಿಳಿಸಿಲ್ಲ. ಹಣ್ಣು ಹಾಗೂ ತರಕಾರಿ ಅಭಿವೃದ್ಧಿ ಹಾಗೂ ಮಾರಾಟದ ಬಗ್ಗೆ ಹುನಗುಂದ ತಾಲ್ಲೂಕು ಮತ್ತು ಬಾದಾಮಿ ತಾಲ್ಲೂಕು ಗುರಿ ಮತ್ತು ಸಾಧನೆ ಎರಡನ್ನೂ ಕೊಟ್ಟಿಲ್ಲ. ಈ ರೀತಿ ತಾರತಮ್ಯವಾಗಿದೆ. ಇದು ಏಕೆ ಎನ್ನುವುದನ್ನು ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಸಿ. ಬೈರೇಗೌಡ :— ಮಾನ್ಯ ಸಭಾಧ್ಯಕ್ಷರೇ, ಬಹಳ ವಿವರವಾದ ಉತ್ತರವನ್ನು ಅವರ ಪ್ರಶ್ನೆಗೆ ಕೊಟ್ಟಿದ್ದೇವೆ. ಸುಮಾರು 5 ಪುಟ ಆಗುತ್ತದೆ. ಆಮೇಲೆ ಪೂರಕ ಟಿಪ್ಪಣಿ ಸುಮಾರು 3 ಪುಟ ಇದೆ. ಇಷ್ಟು ಉತ್ತರ ನೀಡಿದ್ದೇನೆ. ಪೂರಕ ಟಿಪ್ಪಣಿಯ ಪ್ರತಿಯನ್ನು ಬೇಕಾದರೂ ತಮಗೆ ಓದಗಿಸಿಕೊಡುತ್ತೇನೆ. ಅವರು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಇದೆ. ಆ ಎಲ್ಲಾ ಉತ್ತರವನ್ನು ಹೇಳಬೇಕಾದರೆ ಬಹಳ ವೇಳೆಯಾಗುತ್ತದೆ. ಆದರೆ, ಅವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಕೆಲವು ಕಡೆ ಕಳಪೆ ಕಾಮಗಾರಿಗಳು ಆಗುತ್ತಾ ಇವೆ ಎನ್ನುವುದನ್ನು ಪ್ರಸ್ತಾಪ ಮಾಡಿದ್ದಾರೆ. ನಿರ್ದಿಷ್ಟವಾಗಿ ಇಂತಹ ಕಡೆ ಕಳಪೆ ಕಾಮಗಾರಿಗಳು ಆಗುತ್ತಾ ಇವೆ ಎಂದು ತಿಳಿಸಿದರೆ, ಒಂದು ವೇಳೆ ಅವರಿಗೆ ಮಾಹಿತಿ ಲಭ್ಯವಿಲ್ಲದಿದ್ದರೆ ನಂತರವಾದರೂ ತಿಳಿಸಿದರೆ, ತಕ್ಷಣ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಆಮೇಲೆ ತಾರತಮ್ಯದ ಬಗ್ಗೆಯೂ ಸಹ ಹೇಳಿದ್ದಾರೆ. ಆ ರೀತಿಯಾದ ತಾರತಮ್ಯ ಆಗಿಲ್ಲವೆಂಬುದನ್ನು ಅಂಕಿಅಂಶಗಳ ಮೂಲಕ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಉತ್ತರ ಬಹಳ ವಿವರವಾಗಿದೆ. ತಾರತಮ್ಯ ಆಗಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ರಾಜಶೇಖರ ಶೀಲವಂತ ವೀರಣ್ಣ :— ಹುಣಗುಂದ ತಾಲ್ಲೂಕಿನಲ್ಲಿ ಬಹಳಷ್ಟು ಯೋಜನೆಗಳು ಉಳಿದ ಎರಡೂ ತಾಲ್ಲೂಕುಗಳಲ್ಲಿ ಆದ ರೀತಿಯಲ್ಲಿ ಆಗಿಲ್ಲ ಎಂಬುದು ತಮ್ಮ ಅನುಮೋದನೆಯನ್ನು ನೋಡಿದರೆ ಗೊತ್ತಾಗುತ್ತದೆ. ಆಫೀಸನ್ನು ಇನ್ನೂ ಸ್ವಲ್ಪ ಚುರುಕುಗೊಳಿಸಿ ಇನ್ನೂ ಹೆಚ್ಚು ಕೆಲಸ ಆಗುವ ರೀತಿಯಲ್ಲಿ ತಾವು ನೋಡಿಕೊಳ್ಳಬೇಕು.

ಅಧ್ಯಕ್ಷರು :— ಉಚಿತವಾಗಿ ಕೊಟ್ಟುಬಿಡಿ.

ಗ್ರಾಮ ಸಹಾಯಕ ಹುದ್ದೆ ಖಾಯಂ ಮಾಡುವ ಬಗ್ಗೆ.

333(2162) ಶ್ರೀ ವಸಂತ ವಿ. ಸಾಲಿಯಾನ (ಕಾಪು) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಂದಾಯ ಇಲಾಖೆಯಲ್ಲಿ ವಿವಿಧ ಗ್ರಾಮಗಳಲ್ಲಿ ಗ್ರಾಮ ಕರಣಿಕರ ಜೊತೆ ನಿಗಧಿತ ವೇತನಪಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಗ್ರಾಮ ಸಹಾಯಕರ ಹುದ್ದೆಗಳನ್ನು ಖಾಯಂ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಆ) ಹಾಗಿದ್ದಲ್ಲಿ, ಇವರನ್ನು ಎಂದಿನಿಂದ ಖಾಯಂಗೊಳಿಸಲಾಗುವುದು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ಈ ವಿಷಯವನ್ನು ಸರ್ಕಾರವು ಸಚಿವಸಂಪುಟದ ಉಪ ಸಮಿತಿಯ ಶಿಫಾರಸ್ಸಿನಂತೆ ಪರಿಶೀಲಿಸುತ್ತಿದೆ.

ಆ) ಈಗ ಉದ್ಭವಿಸುವುದಿಲ್ಲ.

ಶ್ರೀ ವಸಂತ ವಿ. ಸಾಲಿಯಾನ :— ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಸರ್ಕಾರವು ಸಚಿವ ಸಂಪುಟದ ಉಪ ಸಮಿತಿಯ ಶಿಫಾರಸ್ಸಿನಂತೆ ಪರಿಶೀಲಿಸುತ್ತಿದೆ ಎಂದು ಹೇಳಿದ್ದಾರೆ. ಸುಮಾರು 30 ವರ್ಷಗಳಿಂದ ಕರ್ನಾಟಕ ರಾಜ್ಯದ 175 ತಾಲ್ಲೂಕುಗಳಲ್ಲಿ ಸಾವಿರಾರು ಗ್ರಾಮ ಸಹಾಯಕರ ಹುದ್ದೆಯಲ್ಲಿ ಕೆಲಸ ಮಾಡುವಂಥ ಬಡ ಕಾರ್ಮಿಕರು ಇವತ್ತು ಮನೆ ಮನೆಗೆ ತೆರಳಿ, ಬಿಲ್ ಕಲೆಕ್ಷನ್, ನೋಟೀಸ್ ಮತ್ತು ಇತರ ಕಂದಾಯ ಇಲಾಖೆಯ ಕೆಲಸಗಳನ್ನು ಮಾಡಿಕೊಂಡು ಬಂದಿದ್ದಾರೆ. ಇದರ ಬಗ್ಗೆ ತಾವು ಸಚಿವ ಸಂಪುಟದಲ್ಲಿ ಮಾಡಿದಂಥ ತೀರ್ಮಾನ ಉಪ ಸಮಿತಿಯ ತೀರ್ಮಾನ ಏನಿದೆ, ಕಳೆದ 5 ವರ್ಷಗಳಲ್ಲಿ ಏನು ತೀರ್ಮಾನ ಮಾಡಿದಿರಿ? ಮತ್ತು ಅವರನ್ನು ಯಾವಾಗ ಖಾಯಂ ಮಾಡುವಂಥ ಶಿಫಾರಸ್ ತಾವೇನು ಮಾಡಿದ್ದೀರಿ? ಅದನ್ನು ದಯವಿಟ್ಟು ತಿಳಿಸಬೇಕಾಗಿ ನಾನು ಕೇಳುತ್ತಿದ್ದೇನೆ.